# R.B.A.N.M'S FIRSTGRADE COLLEGE

#12, ANNASWAMY MUDALIAR ROAD, BENGALURU-560042
Ph:080-25512976; Email: princpal_rbanms@yahoo.com; www.rbanmsfgc.ac.in

**Permanently Affiliated to Bengaluru Central University**
**Aided by Government of Karnataka**
**Re-accredited by National Assessment and Accreditation Council with A Grade (3rd Cycle)**

Ref: Principal
**Dr.PRATHAP** Date
M.com., M.Phil.,Ph.D

# Visit to Janapada Loka

<u>**ಶೈಕ್ಷಣಿಕ ಪ್ರವಾಸದ ವರದಿ**</u>

ಆರ್.ಬಿ.ಎ.ಎನ್.ಎಂ.ಎಸ್. ಪ್ರಥಮದರ್ಜೆ ಕಾಲೇಜಿನ ವತಿಯಿಂದ ದಿನಾಂಕ:14.02.2020ರ ಶುಕ್ರವಾರದಂದು ಬೆಂಗಳೂರಿನಿಂದ 53 ಕಿಲೋಮೀಟರ್ ದೂರದಲ್ಲಿರುವ ರಾಮನಗರದ 'ಜಾನಪದ ಲೋಕ'ಕ್ಕೆ ಒಂದು ದಿನ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿದ್ದು, ಈ ಪ್ರವಾಸದಲ್ಲಿ ಸುಮಾರು 23 ವಿದ್ಯಾರ್ಥಿಗಳು (ಬಿಬಿಎ ಮತ್ತು ಬಿಸಿಎ ಕನ್ನಡ ಭಾಷಾ ವಿಭಾಗದಿಂದ) ಪಾಲ್ಗೊಂಡಿದ್ದರು.

ನಮ್ಮ ಕರ್ನಾಟಕದ ಸಂಸ್ಕೃತಿ ಅತ್ಯಂತ ಶ್ರೀಮಂತವಾಗಿದ್ದು, ಜಾನಪದವು ನಮ್ಮ ಸಂಸ್ಕೃತಿಯ ಜೀವಾಳವಾಗಿದೆ. ಇಂತಹ **ವೈವಿಧ್ಯಮಯವಾದ ಜಾನಪದ ಸಂಸ್ಕೃತಿಯನ್ನು, ಪ್ರಾದೇಶಿಕ ಸೊಗಡನ್ನು ಇಂದಿನ ಪಾಶ್ಚಾತ್ಯ ಸಂಸ್ಕೃತಿಯ ಅನುಸರಣೆಯಲ್ಲಿ ತೊಡಗಿರುವ ಯುವ ಪೀಳಿಗೆಗೆ ಪರಿಚಯಿಸುವ ಹಾಗೂ ನಮ್ಮ ಸಂಸ್ಕೃತಿಯನ್ನು ಜೋಪಾನವಾಗಿ ಕಾಪಾಡಿಕೊಳ್ಳುವ ಉದ್ದೇಶದಿಂದ** ರಾಮನಗರದ 'ಜಾನಪದ ಲೋಕ'ಕ್ಕೆ ಭೇಟಿ ನೀಡಿರುವುದು 'ದೇಶ ಸುತ್ತು ಕೋಶ ಓದು' ಎಂಬ ನಾಣ್ಣುಡಿಗೆ ಸಾಕ್ಷಿಯಾಗಿರುತ್ತದೆ.

ಪ್ರವಾಸಕ್ಕೆ ಹೊರಡುವ ಸಮಯವು ಬೆಳಗ್ಗೆ 9.00 ಗಂಟೆಗೆ ನಿಗಧಿಯಾಗಿತ್ತು. ಪ್ರವಾಸಕ್ಕೆ ಸಂಬಂಧಿಸಿದ ಖರ್ಚು ವೆಚ್ಚಗಳನ್ನು ವಿದ್ಯಾರ್ಥಿಗಳು ಮಾತ್ರವಲ್ಲದೆ, ಕಾಲೇಜಿನ ಆಡಳಿತ ಮಂಡಳಿಯು ವಹಿಸಿಕೊಂಡಿತ್ತು. ಕಾಲೇಜಿನಿಂದ 9.30 ಗಂಟೆಗೆ ಹೊರಟ ನಾವುಗಳು 'ಜಾನಪದ ಲೋಕ' ಕ್ಕೆ ತಲುಪಲು ಸುಮಾರು 11.30 ಗಂಟೆಗಳಾಗಿದ್ದವು. ಪ್ರವೇಶ ಶುಲ್ಕ ಭರಿಸಿ ಜಾನಪದ ಕಲೆ-ಸಂಸ್ಕೃತಿ ಕುರಿತ ವಸ್ತು ಸಂಗ್ರಹಾಲಯಕ್ಕೆ ಹೊರಟೆವು.

ಈ ವಸ್ತು ಸಂಗ್ರಹಾಲಯದಲ್ಲಿ ಜನಪದರು ಬಳಸಿದ್ದ ದಿನನಿತ್ಯದ ವಸ್ತುಗಳು, ವೈವಿಧ್ಯಮಯವಾದ ಜನಾಂಗಗಳ ಹಬ್ಬ, ಉಡುಗೆ-ತೊಡುಗೆ-ಸಂಬಂಧ ಛಾಯಾಚಿತ್ರಗಳು ಹಾಗೂ 'ಜಾನಪದ ಲೋಕ' ನಿರ್ಮಾಣದ ರುವಾರಿಯಾಗಿರುವಂತಹ ಎಚ್.ಎಲ್. ನಾಗೇಗೌಡರ ಕೊಡುಗೆಗಳು, ಆಭರಣಗಳು, ವಾದ್ಯಗಳು, ಹಸ್ತಪ್ರತಿಗಳು ಹೀಗೆ ಹತ್ತಾರು ವಿಷಯವನ್ನು ಒಳಗೊಂಡಿತ್ತು. ಜಾನಪದ ಕಲೆ, ಸಂಸ್ಕೃತಿ, ಸಂಪ್ರದಾಯ, ಕಸುಬುಗಳ ಕುರಿತ ಪರಿಪೂರ್ಣ ಮಾಹಿತಿಯನ್ನು ಅಲ್ಲಿಯೇ ನೆಲೆಸಿದ್ದ ಮಾರ್ಗದರ್ಶಿ (Guide) ವಿದ್ಯಾರ್ಥಿಗಳಿಗೆ ಮನವರಿಕೆಯಾಗುವಂತೆ ವಿವರವಾಗಿ ತಿಳಿಸಿ ಕೊಟ್ಟರು. ವಿದ್ಯಾರ್ಥಿಗಳು ಸಹ ಅಷ್ಟೇ ಆಸಕ್ತಿಯಿಂದ ಮಾಹಿತಿಯನ್ನು ಕೇಳುದುದು ಹಾಗೆಯೇ ಸಭ್ಯತೆಯಿಂದ ವರ್ತಿಸಿದುದು ಸಂತೋಷದ ವಿಷಯವಾಗಿದೆ.

ಸುಮಾರು 1.45 ಗಂಟೆಗೆ ಮಧ್ಯಾಹ್ನದ ಭೋಜನವನ್ನು ಮುಗಿಸಿ ನಂತರ ವಿದ್ಯಾರ್ಥಿಗಳು ಛಾಯಾಚಿತ್ರಗಳನ್ನು ತೆಗೆದುಕೊಳ್ಳುವಲ್ಲಿ ನಿರತರಾದರು. ಸುಮಾರು 3.30 ಗಂಟೆಗೆ ಅಲ್ಲಿಂದ ಹೊರಟು 4.45 ಗಂಟೆಗೆ ಕಾಲೇಜಿಗೆ ಹಿಂದಿರುಗಿದೆವು.

ಒಟ್ಟಾರೆಯಾಗಿ ಕಾಲೇಜಿನ ಪ್ರಾಂಶುಪಾಲರು ಹಾಗು ಆಡಳಿತ ಮಂಡಳಿಯವರ ಸಹಕಾರದಿಂದ ಈ ಪ್ರವಾಸವು ಯಶಸ್ವಿಯಾದುದಲ್ಲದೆ "ಪರಿಪೂರ್ಣ ಶಿಕ್ಷಣಕ್ಕಾಗಿ ಪ್ರವಾಸವು ಅತಿಮುಖ್ಯ" ಎಂಬ ಬೇಕನ್ನನ ಮಾತು ಅಕ್ಷರಶ: ನಿಜವಾಗಿದೆ.

ಶ್ರೀಮತಿ.ಪುಷ್ಪಲತಾ ಕೆ.ಆರ್
ಕನ್ನಡ ಉಪನ್ಯಾಸಕರು

**********************************

ಪ್ರಾಂಶುಪಾಲರು
ಆರ್.ಬಿ.ಎ.ಎನ್.ಎಂ.ಎಸ್. ಪ್ರಥಮ ದರ್ಜೆ ಕಾಲೇಜು
ನಂ. 12, ಅಣ್ಣಾಸ್ವಾಮಿ ಮೊದಲಿಯಾರ್ ರಸ್ತೆ,
ಬೆಂಗಳೂರು - 560 042


Anwitha
RBANM's FIRST GRADE COLLEG






JANAPADA LOKA



ಜನಪದರ ಸಾಹಿತ್ಯವನ್ನು ಸಂಗ್ರಹಿಸಿ ಅಕ್ಷರರೂಪದಲ್ಲಿ ಶಾಶ್ವತವಾಗಿ ಉಳಿಸಲು ಬಳಸುತ್ತಿದ್ದ ಸಾಧನಗಳು.



ಜನಪದರು ಬಳಸುತ್ತಿದ್ದ ವಸ್ತುಗಳು.



